www.kuvempu.ac.in
☎Phone No - 08282-256221

E-mail: kureg14@gmail.com
reg.admn@kuvempu.ac.in

# ಕುವೆಂಪು ವಿಶ್ವವಿದ್ಯಾಲಯ

**ಕುಲಸಚಿವರ ಕಾರ್ಯಾಲಯ , ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451 ಶಿವಮೊಗ್ಗ ಜಿಲ್ಲೆ.**

ಸಂಖ್ಯೆ:ಕುವಿ:ಕುಸ:ಆಶಾ:78 :2022-23 ದಿನಾಂಕ:23-06-2022

## ಸುತ್ತೋಲೆ

ವಿಷಯ:- ವಿಶ್ವವಿದ್ಯಾಲಯದ 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳ ಪ್ರವೇಶಾತಿ ಪ್ರಕ್ರಿಯೆಗಳನ್ನು UUCMS ಮುಖಾಂತರ Online ನಲ್ಲಿ ಕೈಗೊಳ್ಳುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶಸಂಖ್ಯೆಇಡಿ34ಇಜಿಒವಿ2020(ಭಾಗ-2),ದಿನಾಂಕ:10-06-2022
2.ಸರ್ಕಾರದ ಪತ್ರ ಸಂಖ್ಯೆ ಇಡಿ34 ಇಜಿಒವಿ2020ದಿನಾಂಕ:13-06-2022

*****

ವಿಶ್ವವಿದ್ಯಾಲಯದ 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ UUCMS ತಂತ್ರಾಂಶದ ಮುಖಾಂತರ ಕಡ್ಡಾಯವಾಗಿ Onlineನಲ್ಲಿಯೇ ಪ್ರವೇಶಾತಿ ನೀಡಬೇಕೆಂದು ಉಲ್ಲೇಖಿತ ಸರ್ಕಾರದ ಆದೇಶಗಳಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಪ್ರಥಮ ವರ್ಷದ ಪ್ರವೇಶಾತಿ ಕೋರಿ ಬರುವ ವಿದ್ಯಾರ್ಥಿಗಳಿಗೆ UUCMS ಮುಖಾಂತರ Onlineನಲ್ಲಿಯೇ ಅರ್ಜಿಯನ್ನು ಸಲ್ಲಿಸುವಂತೆ ತಿಳಿಸುವುದು. ಹಾಗೂ ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮವಹಿಸುವಂತೆ ಸೂಚಿಸಲಾಗಿದೆ.

### ಪ್ರವೇಶಾತಿಗೆ ಸಂಬಂಧಪಟ್ಟಂತೆ ಪ್ರಾಂಶುಪಾಲರುಗಳು ಅನುಸರಿಸಬೇಕಾದ ಕ್ರಮಗಳು

1. ವಿದ್ಯಾರ್ಥಿಗಳು ಕಡ್ಡಾಯವಾಗಿ UUCMS ನಲ್ಲಿಯೇ ಅರ್ಜಿಯನ್ನು ಸಲ್ಲಿಸುವಂತೆ ತಿಳಿಸುವುದು.
2. ಪ್ರಾಂಶುಪಾಲರುಗಳು ಆಯಾ ಕಾಲೇಜುಗಳ ಹಂತದಲ್ಲಿ ಪ್ರವೇಶಾತಿ ಸಮಿತಿಯನ್ನು ರಚಿಸಿಕೊಂಡು ಸದರಿ ಸಮಿತಿಯಲ್ಲಿ ಪ್ರವೇಶಾತಿಯ ಸಹಾಯವಾಣಿ (Help Desk) ಕೇಂದ್ರವನ್ನು ಸ್ಥಾಪಿಸಿಕೊಂಡು ಸಿಬ್ಬಂದಿಯನ್ನು ನೇಮಕ ಮಾಡಿ ಸದರಿಯವರು ಪ್ರವೇಶಾತಿ ಕೋರುವ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ದೊರಕುವಂತೆ ಮಾಡಿ ಸಹಾಯ ವಾಣಿ ಕೇಂದ್ರದ ಸಿಬ್ಬಂದಿಯ ಮೊಬೈಲ್ ಸಂಖ್ಯೆಯನ್ನು ಪ್ರಕಟಿಸಬೇಕು.
3. ಪ್ರವೇಶಾತಿ ಪ್ರಕ್ರಿಯೆಯು ಶೀಘ್ರವಾಗಿ ಪ್ರಾರಂಭವಾಗುವುದರಿಂದ ಅದಕ್ಕೆ ಸಂಬಂಧಿಸಿದ ಕೆಳಕಂಡ 04 ಪ್ರಕ್ರಿಯೆಗಳನ್ನು (Setup) ದಿನಾಂಕ:27-06-2022 ರೊಳಗಾಗಿ ಪೂರ್ಣಗೊಳಿಸುವುದು.
    1. Mapping of the Account Number.
    2. Generate NSDL form
    3. Seat Allocation
    4. College level Admission Fees Update.
4. https:// uucms.karnataka.gov.in ಗೆ ಲಿಂಕ್ ನೀಡಿ ವಿದ್ಯಾರ್ಥಿಗಳು / ಪೋಷಕರುಗಳು ಮಾಹಿತಿಯನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡುವುದು.
5. 2022-23 ನೇ ಸಾಲಿನ ಪ್ರವೇಶಾತಿಗೆ ಕಡೆಯ ದಿನಾಂಕ, ತರಗತಿಗಳ ಪ್ರಾರಂಭದ ದಿನಾಂಕ ಮತ್ತು ಇತರೆ ವಿಷಯಗಳ ಕುರಿತ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು.

ಮೇಲ್ಕಂಡಂತೆ 2022-23ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪ್ರವೇಶಾತಿಗೆ ಅಗತ್ಯ ಕ್ರಮಕೈಗೊಳ್ಳುವಂತೆ ಹಾಗೂ ಪ್ರವೇಶಾತಿಯ ಕುರಿತು ಸ್ಥಳೀಯವಾಗಿ ವ್ಯಾಪಕ ಪ್ರಚಾರ ಮಾಡುವಂತೆಯೂ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ

ಗೆ,
ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸಂಯೋಜಿತ / ಘಟಕ / ನೇರ ಆಡಳಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:-

1. ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ನಿರ್ದೇಶಕರು,ಕಾಲೇಜು ಅಭಿವೃದ್ಧಿ ಪರಿಷತ್ತು ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
4. ನಿರ್ದೇಶಕು, ಯುಸಿಸಿಎಫ್ ಮತ್ತು ಐಟಿ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6. ಸಹಾಯಕ ಕುಲಸಚಿವರು / ಶಾಖಾಧಿಕಾರಿಗಳು, ಶೈಕ್ಷಣಿಕ ವಿಬಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
7. ಆಪ್ತ ಸಹಾಯಕರು, ಮಾನ್ಯ ಕುಲಪತಿಗಳ/ ಕುಲಸಚಿವರು (ಪರೀಕ್ಷಾಂಗ)ರವರ ಆಪ್ತ ಕಾರ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8. ಕಛೇರಿ ಪ್ರತಿ.